**PW-1** OS70/2024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:70/2024**

**ಪಿ.ಡಬ್ಲೂ:01 ಶ್ರೀ ಜಾನ್ಸನ್**

**ಸಾಕ್ಷಿಯನ್ನು ದಿನಾಂಕಃ 17-07-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ಪ್ರತಿವಾದಿಯ ಪರ ಶ್ರೀ.ಎನ್ ಎಸ್ ವಕೀಲರಿಂದ**

1. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ನಾನು ಈಗಾಗಲೇ ಹಾಜರುಪಡಿಸಿದ ನಿಪಿ1 ದಿಃ26.09.1984 ರ ಕ್ರಯ ಪತ್ರದ ಮೂಲ ದಾಖಲೆ ಎಂದು ಒಪ್ಪುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ ಕಾರಣ ನಿಡಿ1 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ನಿಡಿ1 ದಾಖಲೆಯು ನನ್ನ ತಾಯಿಯಾದ ಅರ್ಪುದಮ್ಮಲ್ ರವರ ಹೆಸರಿನಲ್ಲಿ ನೊಂದಾವಣಿ ಆಗಬೇಕಾಗಿದ್ದು ಆದರೆ ಅದು ರಾಜೇಶ್ವರಿ (1ನೇ ಪ್ರತಿವಾದಿ) ಹೆಸರಿನಲ್ಲಿ ಇದೆ ಎನ್ನುತ್ತಾರೆ. ಸಾಕ್ಷಿಗೆ ನಿಡಿ1 ರ 2ನೇ ಪುಟವನ್ನು ತೋರಿಸಲಾಗಿ ಅದರಲ್ಲಿ ನೊಂದಾವಣಿ ಸಂಖ್ಯೆ 2145 ಎಂದು ನಮೂದಿದೆ ಎಂದರೆ ಹೌದು ಎಂದು ಒಪ್ಪಿದ್ದು ಅದನ್ನು ಈಗ ನಿಡಿ1 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ನಿಡಿ1 ಎ ರಲ್ಲಿ ನಮೂದು ಮಾಡಿದ 2145 ಎಂಬ ನೊಂದಣಿ ಸಂಖ್ಯೆ ನಮೂದು ಇರುವ ಬಗ್ಗೆ ನೋಡಿ ಗುರುತಿಸಿದ್ದು ಸದರಿ ದಾಖಲೆಯು ಖಾತಾ ದಾಖಲೆ ಆಗಿದ್ದು ಅದನ್ನು ಈಗ ನಿಡಿ2 ಎಂದು ಗುರುತಿಸಲಾಯಿತು. ಸದರಿ ನಿಡಿ2 ದಾಖಲೆಯಲ್ಲಿ 1ನೇ ಪ್ರತಿವಾದಿ ಹೆಸರು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಖಾತಾ ಸಂಖ್ಯೆ ಬೇರೆ ಬೇರೆ ಎನ್ನುತ್ತಾರೆ.

2. ಸಾಕ್ಷಿಗೆ ಇನ್ನು ಎರಡು ದಾಖಲೆಗಳನ್ನು ತೋರಿಸಲಾಗಿ ಅವೆರಡು ದಾಖಲೆಗಳಲ್ಲಿ 1ನೇ ಪ್ರತಿವಾದಿ ಹೆಸರನ್ನು ಗುರುತಿಸಿದ್ದು ಸದರಿ ದಾಖಲೆಗಳನ್ನು ನಿಡಿ3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ನಿಡಿ3 ಮತ್ತು 4 ಹೆಸರುಗಳಲ್ಲಿ ನನ್ನ ತಾಯಿಯ ಹೆಸರು ಇರಬೇಕಾಗಿತ್ತು ಎನ್ನುತ್ತಾರೆ. ಸಾಕ್ಷಿಗೆ 6 ಕಂದಾಯ ರಸೀದಿಗಳನ್ನು ತೋರಿಸಲಾಗಿ ಅವುಗಳಲ್ಲಿ 1ನೇ ಪ್ರತಿವಾದಿ ಹೆಸರು ನೋಡಿ ಗುರುತಿಸಿದ್ದು ಅವುಗಳನ್ನು ಈಗ ಕ್ರಮವಾಗಿ ನಿಡಿ 5 ರಿಂದ 10 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಕರ್ನಾಟಕ ವಿದ್ಯುತ್ ಚಕ್ತಿ ಮಂಡಳಿಯವರು ನೀಡಿದ ಪತ್ರವಾಗಿದ್ದು ಅದರಲ್ಲಿ ಕರೆಂಟ್ ಮೀಟರ್ ಮೊದಲು ಮೋಹನ್ ರಾಜ್ ರವರ ಹೆಸರಿನಲ್ಲಿದ್ದು ನಂತರ 1ನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಆಗಿದೆ ಎಂದು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗ ನಿಡಿ11 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದು ನಂತರ ಈ ಎಲ್ಲಾ ದಾಖಲೆಗಳ ಬಗ್ಗೆ ತಿಳಿದು ಬಂತು ಎನ್ನುತ್ತಾರೆ.

3. ನಾನು ಭಾರತೀಯ ಸೇನೆಯಿಂದ 31.07.2018 ರಂದು ನಿವೃತ್ತಿ ಹೊಂದಿರುತ್ತೇನೆ. ನಾನು ಇಲ್ಲಿಯವರೆಗೆ ಸದರಿ ನನ್ನ ಸೇವೆಯನ್ನು ಭಾರತೀಯ ಸೇನೆಯಲ್ಲಿ ನಿರ್ವಹಿಸಿದ ಬಗ್ಗೆ

ತೋರಿಸುವ ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಬಳಿ ಇದ್ದು ಮುಂದೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸದರಿ ವಿಚಾರದ ಬಗ್ಗೆ ಹಾಗೂ ನನ್ನ ನಿವೃತ್ತಿಯ ಬಗ್ಗೆ ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ಸದರಿ ನನ್ನ ಸೇವೆಯನ್ನು ನಾನು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ1 ಕ್ರಯ ಪತ್ರವನ್ನು 1984 ನೇ ಸಾಲಿನಲ್ಲಿ ಮಾಡುವ ಸಂದರ್ಭದಲ್ಲಿ ನಾನು ಬೆಂಗಳೂರಿನಲ್ಲಿ ಕೆಲಸದಲ್ಲಿ ಇದ್ದೆನು. 1984 ರಲ್ಲಿ ನಿಡಿ1 ರಲ್ಲಿ ನಮೂದು ಮಾಡಿದ ಆಸ್ತಿಯನ್ನು ಖರೀದಿ ಮಾಡುವ ಸಂದರ್ಬದಲ್ಲಿ ಅದು ಮಂಗಳೂರು ಹಂಚಿನ ಮನೆಯಾಗಿತ್ತು ಎಂದರೆ ಸರಿ.

4. ಸಾಕ್ಷಿಗೆ ಈ 5 ಛಾಯ ಚಿತ್ರಗಳನ್ನು ತೋರಿಸಲಾಗಿ ಅವುಗಳು ಈಗ ದಾವ ಆಸ್ತಿಯಲ್ಲಿರುವ ನಂತರ ಕಟ್ಟಿರುವ ಹೊಸದಾದ ಕಟ್ಟಡ ಎಂದು ನೋಡಿ ಗುರುತಿಸುತ್ತಾರೆ. ಸದರಿ ಛಾಯ ಚಿತ್ರಗಳನ್ನು ಈಗ ಕ್ರಮವಾಗಿ ನಿಡಿ12 ರಿಂದ 16 ಎಂದು ಗುರುತಿಸಲಾಯಿತು. ನಿಡಿ12 ಛಾಯ ಚಿತ್ರದಲ್ಲಿ 1 ಮತ್ತು 2 ನೇ ಪ್ರತಿವಾದಿ ರವರು ಹಾರ ಹಾಕಿ ನಿಂತಿರುತ್ತಾರೆ ಎಂದರೆ ಸರಿ. ನಿಡಿ13 ಮತ್ತು 16 ಛಾಯ ಚಿತ್ರಗಳಲ್ಲಿ ರಾಜೇಶ್ವರಿ ಇಲ್ಲಂ ಎಂದು ನಮೂದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಯು ನನ್ನ ದೊಡ್ಡ ಅಣ್ಣನಾಗಿದ್ದು ಆತನಲ್ಲಿ ನಾನು ವಿಶ್ವಾಸ ಇಟ್ಟಿದ್ದೆನು ಎನ್ನುತ್ತಾರೆ. ಸಾಕ್ಷಿಗೆ ಇನ್ನು 4 ಛಾಯ ಚಿತ್ರಗಳನ್ನು ತೋರಿಸಲಾಗಿ ಅವುಗಳು ಸಹ ಸದರಿ ಕಟ್ಟಡದ ಉದ್ಘಾಟನೆ ಸಂದರ್ಬದಲ್ಲಿ ತೆಗೆದಂತಹ ಛಾಯ ಚಿತ್ರಗಳು ಎಂದು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ17 ರಿಂದ 20 ಎಂದು ಗುರುತಿಸಲಾಯಿತು. ಸದರಿ ಛಾಯ ಚಿತ್ರಗಳಿಗೆ ಸಂಬಂದ ಪಟ್ಟ ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ಈಗ ನಿಡಿ21 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ18 ಛಾಯ ಚಿತ್ರವನ್ನು ತೋರಿಸಲಾಗಿ ಅದು ನನ್ನ ತಾಯಿಯ ಫೋಟೋ ಎಂದು ನೋಡಿ ಗುರುತಿಸುತ್ತಾರೆ. ಆ ಸಮಯದಲ್ಲಿ ನಾನು ಸದರಿ ಕಾರ್ಯಕ್ರಮಕ್ಕೆ ನನ್ನ ಕೆಲಸದ ವಿಚಾರವಾಗಿ ಬೇರೆ ಕಡೆ ಇದ್ದ ಕಾರಣ ಅದಕ್ಕೆ ಬಾಗಿ ಆಗಿರುವುದಿಲ್ಲ.

5. ಸದರಿ ಛಾಯ ಚಿತ್ರಗಳಲ್ಲಿರುವ ಕಟ್ಟಡವನ್ನು ಹಳೆ ಮಂಗಳೂರು ಹಂಚಿನ ಕಟ್ಟಡವನ್ನು ಕೆಡವಿ ಹೊಸದಾಗಿ ಕಟ್ಟಲಾಗಿದೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಕಟ್ಟಡ ನಿರ್ಮಾಣಕ್ಕೆ ಹಣವನ್ನು ಪ್ರತಿವಾದಿಗಳಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೇ. ಸದರಿ ಛಾಯ ಚಿತ್ರಗಳಲ್ಲಿರುವ ಕಟ್ಟಡವನ್ನು 1 ನೇ ಪ್ರತಿವಾದಿ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಆದರೆ ಹಣ ನಾನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಸದರಿ ನನ್ನ ಪ್ರಕಾರ ಪ್ರತಿವಾದಿಗಳಿಗೆ ಹಣವನ್ನು ಕೊಟ್ಟಿರುವ ಬಗ್ಗೆ ದಾಖಲೆಗಳು ಇರುತ್ತದೆ. ನಾನು ಸದರಿ ದಾಖಲೆಗಳನ್ನು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಡಿ14 ಛಾಯ ಚಿತ್ರವನ್ನು ತೋರಿಸಲಾಗಿ ಸದರಿ ಹೊಸ ಕಟ್ಟಡದ ಕೆಳಗಿನ ಫ್ಲೋರಿನಲ್ಲಿ 5 ಅಂಗಡಿಗಳು ಇವೆ ಎಂದರೆ ಸರಿ. ಸದರಿ 5 ಅಂಗಡಿಗಳಿಗೆ ಸಂಬಂದ ಪಟ್ಟಂತೆ 1 ನೇ ಪ್ರತಿವಾದಿ ರವರು ಅವುಗಳನ್ನು ಬಾಡಿಗೆಗೆ ನೀಡಿದ್ದು ಬಾಡಿಗೆ ಕರಾರು ಪತ್ರಗಳು ಸಹ 1 ನೇ ಪ್ರತಿವಾದಿ ಹೆಸರಿನಲ್ ಇವೆ ಎಂದರೆ ಸಾಕ್ಷಿಯು ಹೌದು ಎಲ್ಲಾ ಅದಿಕಾರವರನ್ನು 2 ನೇ ಪ್ರತಿವಾದಿಯು ದೊಡ್ಡ ಅಣ್ಣನಾದ ಕಾರಣ ಕೊಡಲಾಗಿತ್ತು ಎನ್ನುತ್ತಾರೆ.

6. ಸಾಕ್ಷಿಗೆ 5 ಬಾಡಿಗೆ ಕರಾರು ಪತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ 1 ನೇ ಪ್ರತಿವಾದಿಯ ಹೆಸರನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಈಗ ಕ್ರಮವಾಗಿ ನಿಡಿ22 ರಿಂದ 26 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ರೆಂಟ್ ಕಲೆಕ್ಟರ್ ಗಳಾಗಿದ್ದು ಅವರಿಗೆ ಎಲ್ಲಾ ಅಧಿಕಾರವನ್ನು ಕೊಡಲಾಗಿತ್ತು ಎನ್ನುತ್ತಾರೆ. ಸದರಿ 1 ನೇ ಪ್ರತಿವಾದಿಯುದಾವಾ ಆಸ್ತಿಯಲ್ಲಿರುವ ಅಂಗಡಿಗಳಿಗೆ ಸಂಬಂದ ಪಟ್ಟಂತೆ ನನಗಾಗಲೀ, ನನ್ನ ತಾಯಿಯವರಿಗಾಗಲೀ ಯಾವತ್ತೂ ಸಹ ಬಾಡಿಗೆ ಹಣವನ್ನು ಕೊಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಸರಿ, ಆದರೆ ನನ್ನ ಅಣ್ಣನಾದ 2 ನೇ ಪ್ರತಿವಾದಿಯು ಬಾಡಿಗೆ ಹಣವನ್ನು ಕೊಡುತ್ತಿದ್ದರು ಎನ್ನುತ್ತಾರೆ. ಸದರಿ ನನ್ನ ಪ್ರಕಾರ 2 ನೇ ಪ್ರತಿವಾದಿಯು ಬಾಡಿಗೆ ಹಣವನ್ನು ನನಗೆ ಕೊಡುತ್ತಿರುವ ವಿಚಾರವನ್ನು ತೋರಿಸುವ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಒಟ್ಟು ಕುಟುಂಬದ ಆಸ್ತಿ ಎನ್ನುತ್ತಾರೆ.

7. ಸದರಿ ದಾವಾ ಆಸ್ತಿಯ ಕಟ್ಟಡದಲ್ಲಿ 5 ಅಂಗಡಿಗಳ ಜೊತೆ 7 ಮನೆಗಳು ಇದ್ದು ಅವುಗಳಲ್ಲಿ ಒಂದು ಮನೆಯಲ್ಲಿ ಪ್ರತಿವಾದಿಗಳು ವಾಸ ಮಾಡುತ್ತಿದ್ದು ಉಳಿದ 6 ಮನೆಗಳನ್ನು ಬಾಡಿಗೆಗೆ ಕೊಡಲಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು 3 ಮನೆಗಳು ಬಾಡಿಗೆಗೆ ಇತ್ತು ಎನ್ನುತ್ತಾರೆ. ಸದರಿ 6 ಮನೆಗಳಿಗೆ ಸಂಬಂದ ಪಟ್ಟಂತೆ ಬಾಡಿಗೆ ಹಣವನ್ನು 1 ನೇ ಪ್ರತಿವಾದಿಯು ಪಡೆದುಕೊಳ್ಳುತ್ತಿದ್ದರು ಎಂದರೆ ಹೌದು. ಸದರಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯವರು ಖರೀದಿ ಮಾಡಿದ್ದು ನಂತರ ಅವರು ಅದರಲ್ಲಿ ಇದ್ದ ಹಳೆ ಹಂಚಿನ ಮನೆಯನ್ನು ಕೆಡವಿ ಹೊಸ ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಎಸ್ ಎನ್ ಆರ್ ಹಾಸ್ಪಿಟಲ್ ಕೋಲಾರದಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದು ಅವರು ದಿಃ06.12.1972 ರಂದು ಜಾಯಿನ್ ಆಗಿ, ಅವರು ದಿಃ30.05.1998 ರಂದು ನಿವೃತ್ತಿಗೊಂಡಿರುತ್ತಾರೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿಯು ತನ್ನ ಸ್ವಂತ ಸಂಪಾದನೆ ಇಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದು 2 ನೇ ಪ್ರತಿವಾದಿಗೂ ಅದಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

8. ನಾನು ಹೇಳಿದಂತೆ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ನಾನು ಹಣವನ್ನು ಮೋಹನ್ ರಾಜ್ ರವರಿಗೆ ಕೊಟ್ಟಿದ್ದು ಆದರೆ 2 ನೇ ಪ್ರತಿವಾದಿಯು ತಾಯಿಯ ಹೆಸರಿನಲ್ಲಿ ದಾಖಲೆಯನ್ನು ನೊಂದಾವಣಿ ಮಾಡುವ ಬದಲು 1 ನೇ ಪ್ರತಿವಾದಿ ಹೆಸರಿನಲ್ಲಿ ಮಾಡಿರುತ್ತಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಮತ್ತು ನನ್ನಒಡ ಹುಟ್ಟಿದವರು 1 ನೇ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಪ್ರತಿವಾದಿಗಳ ವಿರುದ್ದ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯವರು 1988 ರಲ್ಲಿ ಮರಣ ಹೊಂದಿರುತ್ತಾರೆ. ಸದರಿ ನನ್ನ ತಾಯಿಯವ ರ ಜೀವಿತಾಕಾಲದಲ್ಲಿ ನಾನು ಹೇಳಿದಂತೆ ಅವರ ಹೆಸರಿಗೆ ಬದಲಾಗಿ 1 ನೇ ಪ್ರತಿವಾದಿ ಹೆಸರಿನಲ್ಲಿ ಕ್ರಯ ಪತ್ರ ಮಾಡಿರುವುದು ಸರಿಯಲ್ಲ ಎಂದು ಯಾವುದಾದರೂ ದಾವೆಯನ್ನು ತಾಯಿಯವರು ಹೂಡಿರುತ್ತಾರಾ ಎಂದರೆ ಇಲ್ಲ.

ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಸೇರಿದ್ದಾಗಿದ್ದು ಅವರೇ ಅದರ ಮಾಲೀಕರಾಗಿದ್ದು ನನಗೆ ಅದರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

9. ಸದರಿ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಮೋಹನ್ ರಾಜ್ ರವರಿಂದ ಕೃಷ್ಣನ್ ರವರು ನ್ಯಾಯಾಲಯದಿಂದ ಅಟಾಚ್ ಮೆಂಟ್ ಆದೇಶವನ್ನು ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯು ನನ್ನ ತಾಯಿಯ ಹೆಸರಿನಲ್ಲಿ ಇದ್ದಿದ್ದರೆ ನನಗೆ ಅದರ ಬಗ್ಗೆ ಗೊತ್ತಾಗುತ್ತಿತ್ತು, ಆದರೆ ಅದು 1 ನೇ ಪ್ರತಿವಾದಿ ಹೆಸರಿನಲ್ಲಿ ಇರುವ ಕಾರಣ ನನಗೆ ಗೊತ್ತಾಗಲಿಲ್ಲ ಎನ್ನುತ್ತಾರೆ. ಸದರಿ ಅಟಾಚ್ ಮೆಂಟ್ ಆದೇಶದ ನಂತರ 1 ನೇ ಪ್ರತಿವಾದಿ ರವರು ಮಿಸ್ 13/1986 ರಂತೆ ಪ್ರಕರಣವನ್ನು ಹೂಡಿ ಅದರಲ್ಲಿ ಅಟಾಚ್ ಮೆಂಟನ್ನು ಬಿಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೆಲಸದ ನಿಮಿತ್ತ ಇರಾಕ್ ಗೆ ಹೋದ ಸಂದರ್ಬದಲ್ಲಿ 2 ನೇ ಪ್ರತಿವಾದಿ ರವರು ನನಗೆ ಸಹಾಯ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಇರಾಕ್ ನಲ್ಲಿ ನಾನು ಸಂಪಾದಿಸಿದ ಹಣದಿಂದ ಬೆಂಗಳೂರಿನಲ್ಲಿ ಮತ್ತು ಪುಣೆಯಲ್ಲಿ ಮನೆಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು 2023 ನೇ ಸಾಲಿನಲ್ಲಿ ಬಿಡಿಎ ಇಂದ ಒಂದು ಮನೆಯನ್ನು ಖರೀದಿ ಮಾಡಿರುತ್ತೇನೆ ಎನ್ನುತ್ತಾರೆ.

10. ನಾನು ಸುಮಾರು 34 ವರ್ಷಗಳಿಂದ ಪುಣೆಯಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಪುಣೆಯಲ್ಲಿ ಉತ್ತಮ ಆರ್ಥಿಕ ಸ್ಥಿತಿಯಲ್ಲಿ ವಾಸ ಮಾಡುತ್ತಿದ್ದು ನನ್ನ ಒಡ ಹುಟ್ಟಿದವರ ಮಾತನ್ನು ಕೇಳಿಕೊಂಡು ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ದಾವೆಗೆ ಪೂರಕವಾಗಿ ನಿಪಿ3 ಪಾಸ್ ಪುಸ್ತಕವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಸಹ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಮೋಹನ್ ರಾಜ್ ರವರಿಗೆ ಹಣವನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಒಟ್ಟು 30,000 ಹಣವನ್ನು ಮೋಹನ್ ರಾಜ್ ರವರಿಗೆ ನಾನು ಪಾವತಿಸಿರುತ್ತೇನೆ ಎನ್ನುತ್ತಾರೆ. ಮೋಹನ್ ರಾಜ್ ರವರು ರಾಜಸಿಂಹ ಎಂಟರ್ ಪ್ರೈಸಸ್ ಎಂದು ಒಂದು ಚಿಟ್ ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

11. ದಾವಾ ಆಸ್ತಿಗೆ ಸಂಬಂದ ಪಟ್ಟಂತೆ 1 ನೇ ಪ್ರತಿವಾದಿಯೆ ತನ್ನ ಸ್ವಂತ ಸಂಪಾದನೆ ಹಣವನ್ನು ಉಪಯೋಗಿಸಿ ಖರೀದಿ ಮಾಡಿದ್ದು ನಾನು ಯಾವತ್ತೂ ಸಹ ಅದಕ್ಕೆ ಸಂಬಂದ ಪಟ್ಟಂತೆ ಹಣವನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚವರ ಗೊತ್ತಿದ್ದರೂ ಸಹ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಒದಿ ಹೇಳಿ ಕೇಳಿ ಸರಿ ಇದೆ**

**PW-1** OS70/2024

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**